ತೆಗೆದುಕೊಂಡು ಕೆಲಸ ಮಾಡುತ್ತಿರುವ ಗ್ರಾಮ ಸಹಾಯಕರು, ಉಗ್ರಾಣಿಗಳು, ಇವರನ್ನು ಸರ್ಕಾರ ಮರೆತಂತೆ ಕಾಣುತ್ತದೆ. ಅದರು ಇದರ ಬಗ್ಗೆ ಅನೇಕಸಾರಿ ಸರ್ಕಾರದ ಗಮನಕ್ಕೆ ತಂದರೂ ಕೂಡ ಸರ್ಕಾರ ಗಮನಹರಿಸಿಲ್ಲ. ಈ ವಿಚಾರದಲ್ಲಿ ಕಳೆದ ವರ್ಷ ಸರ್ಕಾರದ ಗಮನ ಸೆಳೆದರೂ ಕೂಡ ಯಾವುದೇ ರೀತಿಯ ಫಲಕಾರಿಯಾಗಿಲ್ಲ. 4ರೂ. ಸಂಬಳ ತೆಗೆದುಕೊಂಡು ಅತನು ತನ್ನ ಕುಟುಂಬವನ್ನು ಯಾವ ರೀತಿ ನಿರ್ವಹಣೆ ಮಾಡಬೇಕು ? ಆದರಲ್ಲಿ ಯಾರಿಗಾದರೂ ಒಬ್ಬರಿಗೆ ಕುಡಿತದ ಅಭ್ಯಾಸವಿದ್ದರೆ, 100 ಎಂ.ಎಲ್. ಶರಾಬಿಗೆ 4 ರೂ. ಕೊಡಬೇಕು. ಇವರ ಸಂಬಳದಲ್ಲಿ ಒಳ್ಳೆಯ ಶರಾಬು ಕೂಡ ಕುಡಿಯಲಿಕ್ಕೆ ಸಾಧ್ಯವಿಲ್ಲ. ಕಂಟ್ರಿ ಶರಾಬನ್ನೇ ಕುಡಿಯಬೇಕು. ಇವರು ನಮ್ಮ ಜಿಲ್ಲೆಯಲ್ಲಿ ಸಂಘಟನೆ ಮಾಡಿಕೊಂಡು ಅದರ ಮುಖಾಂತರ ಮಾನ್ಯ ಹುಬ್ಬಳ್ಳಿ ಮಂತ್ರಿಗಳು. ಮಾನ್ಯ ಕಂದಾಯ ಸಚಿವರು, ಮತ್ತು ಇತರ ಸಚಿವರಿಗೆ ಮನವಿಯನ್ನು ಅರ್ಪಿಸಿದ್ದಾರೆ. ಸರ್ಕಾರ ಮಾನವೀಯತೆಯ ದೃಷ್ಟಿಯಿಂದ ಅವರಿಗೆ ದಿನವೊಂದಕ್ಕೆ 4 ರೂ, ಗಳಿಂದ 10 ರೂ. ವೇತನ ಕೊಡುವ ವ್ಯವಸ್ಥೆ ಮಾಡಬೇಕು, ಮತ್ತು ಅವರ 11 ಅಂಶಗಳ ಬೇಡಿಕೆ ಏನಿದೆ, ಅದನ್ನೂ ಈಡೇರಿಸಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಸದಸ್ಯರು ಸಂಬಳ ಹೆಚ್ಚು ಮಾಡಲಿಕ್ಕೆ ಸೂಚನೆ ಕೊಟ್ಟಿದ್ದಾರೆ. ಸರ್ಕಾರ ಅದನ್ನು ವಿಚಾರಣೆ ಮಾಡಿ, ಬೇಗ ನಿರ್ಣಯ ತೆಗೆದು ಕೊಳ್ಳುತ್ತದೆಂದು ತಿಳಿಸಲು ಇಷ್ಟಪಡುತ್ತೇನೆ.

ವಿಷಯ.—ವಿದ್ಯುತ್ ಕಡಿತವನ್ನು ತೆಗೆದು ಹಾಕುವ ಬಗ್ಗೆ

ಶ್ರೀ ಪ್ರತಾಪಚಂದ್ರ ಶೆಟ್ಟಿ.—ವಿದ್ಯುತ್ ಕಡಿತದ ಬಗ್ಗೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ತಾರತಮ್ಯ ಮಾಡಿದ್ದೀರಿ ; ಮತ್ತೆ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ಮಾಡಿ ದಿನವೊಂದಕ್ಕೆ 6 ಗಂಟೆಗಳ ಕಾಲ ವಿದ್ಯುತ್ ಕಡಿತ ಮಾಡಿದ್ದೀರಿ. ಇದರಿಂದ ಸಣ್ಣ ಮತ್ತು ದೊಡ್ಡ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯಲು ಸಾಧ್ಯವಿಲ್ಲವಾಗಿದೆ. ಈಗಾಗಲೇ ಮಳೆ ಅಭಾವದಿಂದಾಗಿ ಪಂಪ್‌ಸೆಟ್‌ಗಳು ಚಾಲನೆ ಮಾಡಲು ವಿದ್ಯುತ್ ಕಡಿತದಿಂದ ತೊಂದರೆಯಾಗಿದೆ. ವಿದ್ಯುತ್ ಕಡಿತವನ್ನು ತೆಗೆದುಹಾಕಲಾಗಿದೆಯೆಂದು ಪತ್ರಿಕೆಗಳಲ್ಲಿ ನೋಡಿದರೂ ಸಹ ಸಂಬಂಧಪಟ್ಟ ಅಧಿಕಾರಿಗಳ ಕೈಗೆ ಆದೇಶ ಇನ್ನೂ ಬಂದಿಲ್ಲ. ಸರ್ಕಾರ ಈ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜೆ.ಎಸ್. ದೇಶ್‌ಮುಖ್ (ಮಾನ್ಯ ವಿದ್ಯುತ್ ಸಚಿವರು).—ವಿದ್ಯುತ್ ಕಡಿತ ವಿಧಿಸುವಾಗ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎನ್ನುವ ವಿಷಯ ಸರಿಯಲ್ಲ. ವಿದ್ಯುತ್ ಕಡಿತ ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ಸಮನಾಗಿ ಅನ್ವಯವಾಗುತ್ತದೆ. ಗ್ರಾಮೀಣ ಜನತೆಗೆ ಕೃಷಿಪಾಗೂ ಚಿಕ್ಕ ಕೈಗಾರಿಕೆಗಳಿಗೆ ಯಾವ ರೀತಿಯ ತೊಂದರೆಯಾಗದಂತೆ ಪಂಪುಸೆಟ್ಟುಗಳಿಗೆ ವಿದ್ಯುತ್ ಕಡಿತ ಯಾವ ಕಾಲದಲ್ಲಿಯೂ ವಿಧಿಸಿರುವುದಿಲ್ಲ. ಇತ್ತೀಚೆಗೆ ಸಣ್ಣ ಕೈಗಾರಿಕೆಗಳಿಗೆ ಕೂಡ ವಿಧಿಸಲಾಗಿದ್ದ ವಿದ್ಯುತ್ ಕಡಿತ (ಎನರ್ಜಿ ಕಟ್) ಅನ್ನು ಜುಲೈ 1ನೇ ತಾರೀಖಿನಿಂದ ಹಿಂದೆಗೆಯಲಾಗಿದೆ. ಆದರೂ ಗ್ರಾಮೀಣ ಪ್ರದೇಶದ ಫೀಡರ್‌ಗಳನ್ನು ದಿನವಹಿ 6 ಗಂಟೆಗಳ ಕಾಲ ಮಾತ್ರ ಲೋಡ್ ಶೆಡ್ಡಿಂಗ್ ಮಾಡುವುದು ಅನಿವಾರ್ಯವಾಗಿದೆ. ಏಕೆಂದರೆ 4½ಲಕ್ಷ ಪಂಪುಸೆಟ್ಟುಗಳು ಓಡುತ್ತಿದ್ದು, ಇದರಿಂದಾಗಿ ರಿಯಾಕ್ಟೀವ್ ಲೋಡಿಂಗ್ ಹೆಜ್ಜಾಗಿ ವೋಲ್ಟೇಜ್ ತಗ್ಗುವ ಸಮಸ್ಯೆಗಳನ್ನು ಸುಲಭ ರೀತಿಯಲ್ಲಿ ಬಗೆಹರಿಸಲಾಗಿದೆ. ಈ ಬಗ್ಗೆ ಸದಸ್ಯರ ಗಮನಕ್ಕೆ ಇನ್ನೊಂದು ವಿಷಯ ತಿಳಿಸಬೇಕಾದ್ದು ಪಂಪುಸೆಟ್ಟುಗಳಿಗೆ ಕೆಪ್ಯಾಸಿಟರ್‌ಗಳನ್ನು ಜೋಡಿಸುವ ಕಾರ್ಯದಿಯನ್ನು ವಿನಾಯಿತಿಗೊಳಿಸಿದ್ದು ಒಂದು ಕಾರಣ.

ಇನ್ನೊಂದು ವಿಷಯ ನೆರೆಹೊರೆ ರಾಜ್ಯಗಳಲ್ಲೂ ಕೂಡ ಈ ಬಗ್ಗೆ 6 ಗಂಟೆಗಳ ಕಾಲ ಲೋಡ್ ಶೆಡ್ಡಿಂಗ್ ಅನ್ನು ಮಾಡಲಾಗುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಪ್ರತಾಪ ಚಂದ್ರ ಶೆಟ್ಟಿ, ಅವರಿಗೆ ಒಂದು ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಲೋಡ್ ಶೆಡ್ಡಿಂಗ್‌ನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬೆಳಿಗ್ಗೆ 6ರಿಂದ ಮಧ್ಯಾಹ್ನ 12ರವರೆಗೆ ಮತ್ತು 12ರಿಂದ ಸಂಜೆ 6 ಘಂಟೆವರೆಗೆ ಎಂದು ಎರಡು ಭಾಗಗಳಾಗಿ ವಿಂಗಡಿಸಿದ್ದೇವೆ. ರಾತ್ರಿ ಎಷ್ಟು ಬೇಕಾದರೂ ಉಪಯೋಗಿಸಬಹುದು. ಆದಕ್ಕೆ ಯಾವುದೇ ನಿರ್ಬಂಧ ಇಲ್ಲ. ಶಹರದಲ್ಲಿ ಕೆಲವು ಕಡೆಗಳಿಗೆ ಬೆಳಿಗ್ಗೆ 10 ಗಂಟೆಯಿಂದ 1 ಗಂಟೆಯವರೆಗೆ ಮತ್ತು 1ರಿಂದ 4ಗಂಟೆಯವರೆಗೆ ಲೋಡ್ ಶೆಡಿಂಗ್‌ಗಳನ್ನು ಮಾಡಿದಂತಹ ಉದಾಹರಣೆ ಇದೆ. ಇದರ ಉದ್ದೇಶ, ರೈತರಿಗೆ ಅನುಕೂಲವಾಗಲೆಂದು, ಇಲ್ಲದಿದ್ದರೆ ಎಲ್ಲ ಕಡೆಗಳಲ್ಲಿ ಎಲ್ಲ ರೈತರು ಪಂಪ್‌ಸೆಟ್‌ಗಳನ್ನು ಹಚ್ಚಿಕೊಂಡರೆ ಸಾಕಷ್ಟು ವಿದ್ಯುತ್ ಇಲ್ಲದೆ ಇರುವುದರಿಂದ, ಯಾರಿಗೂ ವಿದ್ಯುತ್ ಪೂರೈಕೆ ಆಗುವುದಿಲ್ಲ ; ಮತ್ತು ಪಂಪುಸೆಟ್ ಸುಡತಕ್ಕಂತಹ ಭಯ ಇದೆ. ಇದರ ಬಗ್ಗೆ ರೈತರ ಅಭಿಪ್ರಾಯವನ್ನು ಪಡೆದುಕೊಂಡು

ನಾವು ಈ ಕೆಲಸ ತೆಗೆದುಕೊಳ್ಳತಕ್ಕಂತಹ ಪ್ರಸಂಗ ಬಂತು; ಮತ್ತು ಎಲ್ಲಿ ಪಂಪ್‌ಸೆಟ್‌ಗಳ ಸಂಖ್ಯೆ ಜಾಸ್ತಿ ಅಂದರೆ, ಕೋಲಾರ, ಇಂಡಿ, ಬೆಂಗಳೂರು ಸುತ್ತಮುತ್ತ ಸಣ್ಣ ಸಣ್ಣ ಉದ್ದಿಮೆಗಳ ಸಂಖ್ಯೆ ಎಲ್ಲಿ ಕೇಂದ್ರೀಕೃತವಾಗಿದೆಯೋ, ಎಲ್ಲಿ ಪವರ್ ಲೂಮ್ಸ್ ಇದೆಯೋ, ದೊಡ್ಡಬಳ್ಳಾಪುರ ಇಂತಹ ಕಡೆಗಳಲ್ಲಿ ಕ್ಯಾಪ್ಟೀವ್ ಜನರೇಟರ್ ಎಂದು ಮಾಡಿ 5-5 ಮತ್ತು 6-6 ಯೂನಿಟ್ ಮಾಡಬೇಕೆಂದು, 5 ಮೆಗಾ ವ್ಯಾಟ್ ಶಕ್ತಿ ಇರತಕ್ಕಂತಹ 6 ಯೂನಿಟ್‌ಗಳನ್ನು ಒಂದು ಕಡೆಗೆ ತೆಗೆದರೆ 30 ಮೆಗಾವ್ಯಾಟ್ ಆಗುತ್ತದೆ. ಇದರ ಉದ್ದೇಶ ರೈತರಿಗೆ ಮತ್ತು ಸಣ್ಣ ಕೈಗಾರಿಕೆಗಳಿಗೆ ತೊಂದರೆ ಆಗಬಾರದೆಂದು ಈ ವಿಷಯವನ್ನು ಬಡ್ಜೆಟ್ಟಿನಲ್ಲಿಯೂ ಕೂಡ ಹೇಳಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಕುಲಕರ್ಣಿಯವರು ಮಾತನಾಡಿ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಕಾಲರ ಇದೆ, ಕಾಲರದಿಂದ ಅರೇಳ ಜನ ಸತ್ತಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆ.

ಅಧ್ಯಕ್ಷರು.—ಮಾನ್ಯಸದಸ್ಯರು ಈಗ ಕುಳಿತುಕೊಳ್ಳಿ ಆಮೇಲೆ ತಾವು ಏನಾದರೂ ಹೇಳುವುದಿದ್ದರೆ ಹೇಳಿ. ನಾನು ಮಾನ್ಯಸದಸ್ಯರಾದ ಕುಲಕರ್ಣಿಯವರನ್ನು ಮಾತನಾಡಲಿಕ್ಕೆ ಕರೆದಿದ್ದೇನೆ ಅವರು ಮಾತನಾಡಲಿ, ನಾನು ಈಗ ನಿಮಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿಲ್ಲ. ತಾವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ರೂಲ್ಸ್, ರೆಗ್ಯುಲೇಷನ್ಸ್ ತಮಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ಆರ್.ಎನ್. ನಾಯಕ್.—ನಮಗೆ ರೂಲ್ಸ್, ರೆಗ್ಯುಲೇಷನ್ಸ್ ಗೊತ್ತಿದೆ. ನಾವು ನಿಯಮ 334ರ ಪ್ರಕಾರ ಕಳುಹಿಸಿರತಕ್ಕ ನೋಟೀಸ್‌ಗಳಿಗೆ ಯಾವಾಗ ಉತ್ತರ ಕೊಡಿಸುತ್ತೀರಿ ಪುನಃ ಏನಾದರೂ ನೋಟೀಸ್ ಏನಾದರೂ ಕೊಡಬೇಕಾ ? ಯಾವಾಗ ತೆಗೆದುಕೊಳ್ಳುತ್ತೀರಿ ಸ್ವಲ್ಪ ಹೇಳಿ.

ಶ್ರೀ ಕೆ.ಬಿ. ಶಾಣಪ್ಪ.—ನಾನು ಕೂಡ ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನೂ ಕೂಡ ಒಂದು ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಿನ್ನೆ, ಮೊನ್ನೆ, ನಿಯಮ 334ರ ಪ್ರಕಾರ ಯಾವುದೇ ವಿಷಯವನ್ನು ತೆಗೆದುಕೊಂಡಿಲ್ಲ. ಅದರ ಬಗ್ಗೆ ನೋಡಿ ಹೇಳುತ್ತೇನೆ, ಈಗ ಮಾನ್ಯಸದಸ್ಯರಾದ ಕುಲಕರ್ಣಿಯವರು ಮಾತನಾಡಲಿ.

ವಿಷಯ :— ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ (ಮು.ವ)

ಶ್ರೀ ಕುಲಕರ್ಣಿ ಮಲ್ಲಪ್ಪ ಕರವೀರಪ್ಪ (ನವಲಗುಂದ).—ಮಾನ್ಯಅಧ್ಯಕ್ಷರೆ, ಧಾರವಾಡ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಬರಗಾಲವನ್ನು ಎದುರಿಸುತ್ತಿದ್ದೇವೆ. ನವಲಗುಂದ, ನರಗುಂದ ಮತ್ತು ಮುಂಡರಗಿ ತಾಲ್ಲೂಕುಗಳು ಬರಗಾಲವನ್ನು ಎದುರಿಸುತ್ತಿವೆ, ನವಲಗುಂದ ತಾಲ್ಲೂಕಿನಲ್ಲಿ ಸಾಧರಣ 45ಪರ್ಸೆಂಟ್ ನೀರಾವರಿಯಾಗಿದೆ, ಉಳಿಕೆ 55 ಪರ್ಸೆಟ್ ನೀರಾವರಿಯಾಗದೆ ಹಾಗೆಯೇ ಉಳಿದಿದೆ. ನೀರಾವರಿಯಾಗದೆ ಇರತಕ್ಕ ಭಾಗದಲ್ಲಿ ಬರಗಾಲದ ಬವಣೆ ಶುರುವಾಗಿದೆ. ಆ ಭಾಗಗಳಲ್ಲಿ ಆದಷ್ಟು ತೀವ್ರವಾಗಿ ರಸ್ತೆನಿರ್ಮಾಣದ ಕೆಲಸವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ. ರಸ್ತೆಗಳನ್ನು ಮಾಡುವಾಗ ನೀರಾವರಿ ಪ್ರದೇಶಗಳಲ್ಲಿ ಮಾಡಬೇಕು ಏಕೆಂದರೆ ರೈತರು ಕಷ್ಟಪಟ್ಟು ಬೆಳೆದಂತಹ ಫಸಲನ್ನು ಹೊರಗೆ ತೆಗೆದುಕೊಂಡು ಬರಬೇಕಾದರೆ ಈಗ ಬಹಳ ಕಷ್ಟವಾಗುತ್ತಿದೆ. ನೀರಾವರಿ ಪ್ರದೇಶಗಳಲ್ಲಿ ರಸ್ತೆಗಳನ್ನು ಉತ್ತಮವಾಗಿ ಮಾಡಿ ರೈತರಿಗೆ ಅನುಷ್ಟು ಸಹಾಯ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಕೆರೆಗಳಲ್ಲಿ ತುಂಬಿಕೊಂಡಿರತಕ್ಕ ಹೂಳನ್ನು ತೆಗೆಯುವಂತಹ ಕೆಲಸವನ್ನು ಶುರುಮಾಡಬೇಕೆಂದು ಹೇಳುತ್ತೇನೆ. ಕೆಲವಾರು ವರ್ಷಗಳಿಂದ ಕೆರೆಗಳಲ್ಲಿ ತುಂಬಿಕೊಂಡಿರತಕ್ಕ ಹೂಳನ್ನು ತೆಗೆಯದೇ ಇರುವುದರಿಂದ ಕೆರೆಗಳಲ್ಲಿ ನಿಲ್ಲುವ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. ಕೆರೆಗಳಲ್ಲಿ ಹೂಳನ್ನು ತೆಗೆಯುತಕ್ಕ ಕೆಲಸ ಬಹಳ ಮಹತ್ವದ್ದು ಆಗಿದೆ. ನವಲಗುಂದ, ಅಣ್ಣಿಗೇರಿ ಮುನಿಸಿಪಾಲಿಟಿ ಪ್ರದೇಶಗಳಲ್ಲಿ ನೀರಿನ ಬವಣೆ ಇದೆ. ಆದ್ದರಿಂದ ಕುಡಿಯುವ ನೀರಿನ ಸಲುವಾಗಿ ಎರಡೂ ಊರುಗಳ ನಡುವೆ ಕೆರೆಯನ್ನು ಕಟ್ಟಬೇಕೆಂದು ಹೇಳುತ್ತಿದ್ದೇನೆ. ಕೆರೆಯನ್ನು ಕಟ್ಟಿದರೆ ನವಲಗುಂದ ಮತ್ತು ಅಣ್ಣಿಗೇರಿ ಎರಡೂ ಊರುಗಳಿಗೆ ನೀರನ್ನು ಕೊಡುವ ವ್ಯವಸ್ಥೆಯಾಗಬೇಕು. ಮಲಪ್ರಭಾ ಬಲದಂಡೆ ಕಾಲುವೆ ಕೆಲಸವನ್ನು ಬೇಗ ಮುಗಿಸಿದರೆ ನೀರಾವರಿ ಹೆಚ್ಚಿಗೆಯಾಗುತ್ತದೆ ನಾನು ಹೇಳಿದಂತಹ ಕೆಲಸಕಾರ್ಯಗಳನ್ನು ಮಾನ್ಯ ಸಚಿವರು ಆದಷ್ಟು ಬೇಗ ಮಾಡಿಕೊಡಬೇಕಾಗಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಪಿ. ಮೂಡಲಗಿರಿಯಪ್ಪ (ಶಿರಾ).—ಮಾನ್ಯ ಅಧ್ಯಕ್ಷರೆ, ಬರಗಾಲ ಪರಿಸ್ಥಿತಿಯ ಬಗ್ಗೆ ಈ ಸಭೆಯು ಕೂಲಂಕುಷವಾಗಿ ಚರ್ಚೆಯನ್ನು ಮಾಡುತ್ತಿದೆ; ಈ ಬಗ್ಗೆ ನಾನು ಮಾತನಾಡಲು ತಾವು ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಜನತೆಗೆ ಅನುಕೂಲ ಮಾಡಿಕೊಳ್ಳುವುದಕ್ಕೋಸ್ಕರ ಚಲಪಾರು ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಜನತೆಯ ಏಳಿಗೆಗೋಸ್ಕರ